# ನವಿಲುಗನ್ನಡಿ

- ಸಾಹಿತಿ ಪ್ರೊ.ಎಚ್.ಟಿ.ಪೋತೆ ಅವರ ಸಂದರ್ಶನ ಏಪ್ರಿಲ್ ಮಯೂರಕ್ಕೆ ಸೊಗಸು ತಂದಿದೆ. ತಲೆಮಾರುಗಳ ಜೀವನ, ಸ್ವಅಸ್ತಿತ್ವದ ಹುಡುಕಾಟ, ಬುದ್ಧ, ಬಸವ, ಕನಕ, ಅಂಬೇಡ್ಕರ್, ಗಾಂಧಿ, ಫುಲೆಯವರು ತೋರಿದ ಮಾನವೀಯ ಬೆಳಕಿನ ದಾರಿ, ಎಲ್ಲ ಬಗೆಯ ಅವಮಾನಗಳಿಗೂ ಸಾಹಿತ್ಯದ ಅರಿವಿನ ಅಕ್ಷರ ಮೆಟ್ಟಿಲಾಗುತ್ತಾ ಬಂದ ಕೈದೀವಿಗೆಯಂತಹ ಮನದ ಮಾತುಗಳನ್ನು ಪೋತೆಯವರು ಮುಕ್ತವಾಗಿ ಹಂಚಿಕೊಂಡಿದ್ದಾರೆ. ಈ ಸಂಚಿಕೆಗೆ 'ದಲಿತ ವಸಂತ' ಎಂದಿರುವುದೂ ಈ ಮಾತುಕತೆಗೆ ಹೆಚ್ಚು ಇಂಬು ನೀಡುವಂತಿದೆ.

**ಡಾ.ನಿಂಗಪ್ಪ ಮುದೇನೂರು, ಧಾರವಾಡ**

- 'ಗೊಲ್ಲರಹಟ್ಟಿಯಲ್ಲೊಂದು ಯುಗಾದಿ' (ಜಿ.ವಿ.ಆನಂದಮೂರ್ತಿ) ಲೇಖನವು ಶಿರಾ ಭಾಗದ ಯುಗಾದಿ ಸಂಪ್ರದಾಯವನ್ನು ಪರಿಚಯಿಸಿತು. ವಿಶಿಷ್ಟ ರೀತಿಯಲ್ಲಿ ಜುಂಜಪ್ಪನನ್ನು ಪೂಜಿಸುವ ವೈಖರಿ ಯುಗಾದಿಯನ್ನು ಗಟ್ಟಿಗೊಳಿಸುವಂತಹ ಸಂಪ್ರದಾಯ.

**ಮಂಜಪ್ಪ ಎಚ್., ಸಂತೇಬೆನ್ನೂರು**


- 'ಲಲಿತಮಂಟಪ'ದಲ್ಲಿ ಮಂಜರಿ ಚತುರ್ವೇದಿ ಅವರ ಸಂದರ್ಶನ ವಿಶಿಷ್ಟವಾಗಿದೆ. ಅವರ ಸೂಫಿ ಕಥಕ್ ಪರಿಕಲ್ಪನೆ ಅನನ್ಯವಾದುದು. ಕಲಾವಿದರು ಗೆರೆಗಳನ್ನು ಮೀರಿ, ಕಂಫರ್ಟ್ ಅನ್ನು ಮೀರಿ ನಡೆಯುವುದು ಕಲಿಯಬೇಕು. ಆಗ ನಮ್ಮ ವ್ಯಕ್ತಿತ್ವದಲ್ಲಿ, ವರ್ಚಸ್ಸಿನಲ್ಲಿ ವಿಶ್ವಾಸದ ಛಾಯೆಯೊಂದು ಮೂಡುತ್ತದೆ ಎಂದು ಪರಿಕಲ್ಪನೆ ಹೊಸ ಬಗೆಯದು.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- 'ದಲಿತ ವಸಂತ'ದಲ್ಲಿ ಸತ್ಯಾನಂದ ಪಾತ್ರೋಟರ 'ಸ್ಪೃಶ್ಯ– ಅಸ್ಪೃಶ್ಯ' ಕವನ ಮಾರ್ಮಿಕವಾಗಿತ್ತು. ಸುಧಾ ಆಡುಕಳ ಅವರ ಹೆಲೆನ್ ಕೆಲ್ಲರ್ ಪ್ರಬಂಧ 'ಆ ಮೂರು ದಿನಗಳು' ಬಹಳ ಇಷ್ಟವಾಯಿತು.

**ಶ್ರೀಗುರು ಚರಣದಾಸ**

- ಜನಪ್ರಿಯ ಅನುವಾದಕ ಕೆ.ಕೆ. ಗಂಗಾಧರನ್ ಅವರ ಕುರಿತ ಮೋಹನ ಕುಂಟಾರ್ ಅವರ ಬರಹ ಸೊಗಸಾಗಿತ್ತು. ಕಮಲಾದಾಸ್ ಅವರ ಸುಮಾರು 240 ಕಥೆಗಳಲ್ಲಿ 235 ಕಥೆಗಳನ್ನು ಗಂಗಾಧರನ್ ಕನ್ನಡಕ್ಕೆ ಅನುವಾದಿಸಿದ್ದಾರೆ. ಇಂತಹ ವ್ಯಕ್ತಿ ಅನುವಾದಿಸಿದ, ನಟಿ ಶಕೀಲಾ ಜೀವನ ಚರಿತ್ರೆ ಪ್ರಕಟಿಸಲು ಪ್ರತಿಷ್ಠಿತ ಪ್ರಕಾಶಕರೆಲ್ಲ ನಿರಾಕರಿಸಿದ್ದು ತಿಳಿದು ಬೇಸರವಾಯಿತು.




**ಎಂ.ಎ. ಮುಜೀಬ್ ಅಹಮದ್, ಕೊಡಗು**

- ವೆಂಕಟೇಶ ಮಾಚಕನೂರ ಅವರ 'ರೈಲು ಹಳಿಯ ಬಳಿಯಲೊಂದು ಮನೆಯ ಮಾಡಿ' ಪ್ರಬಂಧವು ತುಂಬಾ ಆಸಕ್ತಿಯಿಂದ ಕೂಡಿತ್ತು. ರೈಲ್ವೆ ಹಳಿ ಪಕ್ಕ ಮನೆ ಮಾಡುವುದರಿಂದ ಆಗುವ ಸಾಧಕ–ಬಾಧಕಗಳನ್ನು ಅರ್ಥಪೂರ್ಣವಾಗಿ ಕಟ್ಟಿ ಕೊಟ್ಟಿದ್ದಾರೆ. ಲೇಖಕರಿಗೆ ಅಭಿನಂದನೆಗಳು.

**ದೇವಿಂದ್ರಪ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ**

- ವೀರಣ್ಣ ಮಡಿವಾಳರ ಅವರ ಕವಿತೆಗಳು ಹೊಸ ಬಗೆಯ ನುಡಿಚಿತ್ರಗಳಿಂದ ಕೂಡಿದೆ. ನಂದಿನಿ ಹೆದ್ದುರ್ಗ ಅವರ ಕವಿತೆ ಸೃಜನಶೀಲ ಮಾರ್ಮಿಕ ಸ್ಥಿತಿಯನ್ನು ಚಿತ್ರಿಸಿದೆ. ಸತ್ಯಾನಂದ ಪಾತ್ರೋಟ ಅವರ ಕವನ ಕಟ್ಟುವ ರೀತಿ ಗಮನ ಸೆಳೆಯುತ್ತದೆ. ರೂಪ ಹಾಸನ ಅವರ ಇಡೀ ಕವಿತೆಯು ಹೊಸ ಭಾವಾರ್ಥಗಳ ಸೌಂದರ್ಯದಲ್ಲಿ ಬೆಳಗುತ್ತದೆ.

**ಶ್ರೀಧರ ಪಿಸ್ಸೆ, ಕಮಲಾಪುರ**